ಒಂದು ಪುರಾತನ ದಂತಕತೆಯ ಪ್ರಕಾರ ಜೆರುಸಲೆಮ್ ನಿರ್ಮಾಣವಾದ ಸ್ಥಳದಲ್ಲಿ ಹಿಂದೆ ಇಬ್ಬರು ಸಹೋದರರು ವಾಸಿಸುತ್ತಿದ್ದರು. ಒಬ್ಬನಿಗೆ ಮದುವೆಯಾಗಿತ್ತು, ಅನೇಕ ಮಕ್ಕಳಿದ್ದರು. ಮತ್ತೊಬ್ಬ ಅವಿವಾಹಿತ, ಒಬ್ಬನೇ ವಾಸಿಸುತ್ತಿದ್ದ. ಒಮ್ಮೆ ಅವರು ತಾವು ಬೆಳೆಸಿದ ಗೋದಿಯನ್ನು ರಾಶಿ ಹಾಕಿದರು — ತಮ್ಮ ತಮ್ಮ ಮನೆಯ ಅಂಗಳದಲ್ಲಿ.

ಒಂದು ರಾತ್ರಿ ಅವಿವಾಹಿತ ಸಹೋದರ ಭಾವಿಸಿದ : "ನನ್ನ ಸಹೋದರನ ಕುಟುಂಬ ದೊಡ್ಡದು: ಅವನಿಗೆ ನನಗಿಂತ ಗೋದಿ ಜಾಸ್ತಿ ಬೇಕಾಗುತ್ತದೆ. ನಾನು ಬೆಳೆದ ಗೋದಿಯಲ್ಲಿ ಸ್ವಲ್ಪ ಭಾಗವನ್ನು ಅವನ ರಾಶಿಗೆ ಹಾಕುತ್ತೇನೆ. " ಅವನು ಹಾಗೆಯೇ ಮಾಡಿದ.

ಸ್ವಲ್ಪಹೊತ್ತಿನ ನಂತರ ವಿವಾಹಿತ ಸಹೋದರನಿಗೆ ಎಚ್ಚರವಾಯಿತು. ಅವನು ಭಾವಿಸತೊಡಗಿದ: "ನನ್ನ ಸಹೋದರನು ಒಬ್ಬನೇ ಇದ್ದಾನೆ. ನೆಲ ಉಳಲು ಆತನಿಗೆ ಸಹಾಯ ಮಾಡುವವರಾರೂ ಇಲ್ಲ. ಅವನಿಗೇನಾದರೂ ಸಹಾಯ ಮಾಡಬೇಕು. " ಹೀಗೆ ಯೋಚಿಸುತ್ತ ತನ್ನ ಪಾಲಿನ ಗೋದಿಯ ಸ್ವಲ್ಪಭಾಗವನ್ನು ತೆಗೆದುಕೊಂಡು ಹೋಗಿ ಸಹೋದರನ ರಾಶಿಗೆ ಸುರಿದ.



ಕಲೆ : ಸೋಮಶೇಖರ

ಮರುದಿನ ಬೆಳಗ್ಗೆ ಅವರಿಬ್ಬರ ಗೋದಿಯ ರಾಶಿಯೂ ಮೊದಲಿನಂತೆಯೇ ಇದ್ದುದನ್ನು ಕಂಡು ಇಬ್ಬರಿಗೂ ಪರಮಾಶ್ಚರ್ಯ!

**ಇತರರ ಆವಶ್ಯಕತೆಯನ್ನು ಮನಗಂಡು ಅದಕ್ಕನುಗುಣವಾಗಿ ಸಹಾಯ ಮಾಡುವುದೇ ದಾನ.**